ಅದರಿಂದ ಬೇರೆಯ ಬುಗುರಿಗೆ ಹೊಡೆದರೆ ಗುನ್ನ ಬೀಳುತ್ತಿತ್ತು. ಈ ಬುಗುರಿಯು ಸಾಕಷ್ಟು ಹೊತ್ತು ತಿರುಗುತ್ತಿತ್ತು. ಹಾಗಾಗಿ ಇದನ್ನು ಅಪೀಟ್ ಮಾಡಲು ಸಮಯ ಸಿಕ್ಕುತ್ತಿತ್ತು.

ಮತ್ತೊಂದು ಅನುಭವಿ ಆಟಗಾರರು ಆಕ್ರಮಣಕಾರಿ ಆಟಕ್ಕೆ ಬಳಸುವ ಬಾಚಿಮೊಳೆ. ಮೊಳೆಯ ಕೆಳತುದಿಯನ್ನು ಸುತ್ತಿಗೆಯಲ್ಲಿ ಬಡಿದು, ಚಪ್ಪಟೆ ಮಾಡಿ, ಅಗಲವಾದ ತುದಿಯ ಎರಡು ಬದಿಯೂ ಚೂಪಾಗಿರುವಂತೆ ಸಾಣೆ ಹಿಡಿದಿರುತ್ತಿದ್ದರು. ಅದರ ಆಕಾರವು ನಮ್ಮ ಬಾಯಿಯ ಮುಂಭಾಗದಲ್ಲಿರುವ ಬಾಚಿಹಲ್ಲಿನ ಆಕಾರವನ್ನು ಹೋಲುತ್ತಿದ್ದುದರಿಂದ ಅದನ್ನು ಬಾಚಿಮೊಳೆ ಎಂದೇ ಕರೆಯುತ್ತಿದ್ದೆವು. ಇದರ ತುದಿಯು ಸ್ವಲ್ಪ ಅಗಲವಾಗಿರುವುದರಿಂದ ಅದು ನೆಲದ ಮೇಲೆ ಹೆಚ್ಚು ಕಾಲ ತಿರುಗುತ್ತಿರಲಿಲ್ಲ. ಆದಷ್ಟು ಬೇಗ ಅಪೀಟ್ ಮಾಡಿಬಿಡಬೇಕು. ಆದರೆ ಬಾಚಿಮೊಳೆಯು ನೆಲದ ಮೇಲಿದ್ದ ಬುಗುರಿಯ ಪಾಲಿಗೆ ಯಮದೂತನಂತೆ ಕಾಣಿಸುತ್ತಿತ್ತು. ಸರಿಯಾದ ಹೊಡೆತ ಬಿದ್ದರೆ ನೆಲದ ಮೇಲಿದ್ದ ಬುಗುರಿಯಿಂದ ಚಕ್ಕೆ ಏಳುವುದು ಗ್ಯಾರಂಟಿ. ಈ ಬುಗುರಿಯನ್ನು ತಿರುಗಿಸಲು ಚಾವಟಿಯನ್ನು ಎರಡು ಸುತ್ತು ಹೆಚ್ಚಾಗಿ ಸುತ್ತಬೇಕು. ಹಾಗಾಗಿ ಅಪೀಟ್ ಮಾಡಲು ನಿಧಾನವಾಗುತ್ತಿತ್ತು. ಇಲ್ಲೇ ಅನುಭವೀ ಆಟಗಾರನ ಚಾಕಚಕ್ಯತೆ ಮುಂಬದಿಗೆ ಬರುತ್ತಿದ್ದುದು.

ನಾನು ಕೊಂಡಿದ್ದ ಬಣ್ಣದ ಬುಗುರಿಗೆ ಮೊಳೆಯನ್ನು ಹಾಕಿಸಲು ಮನೆಯ ಹತ್ತಿರದ ಬೆಸ್ಟ್ ಟ್ರೇಡರ್ಸ್‌ಗೆ ಹೋದೆ. ನಮ್ಮ ಆಟಕ್ಕೆ ಬೇಕಾಗುವ ಬುಗುರಿ, ಚಾವಟಿ, ಗೋಲಿ ಅಲ್ಲದೆ ಸೀಸದ ಕಡ್ಡಿ, ರಬ್ಬರ್ರು, ಎಕ್ಸರ್ಸೈಜ್ ಪುಸ್ತಕ ಎಲ್ಲವನ್ನೂ ನಾವು ಅಲ್ಲೇ ಕೊಳ್ಳುತ್ತಿದ್ದುದು. ಆ ಅಂಗಡಿಯ ಯಜಮಾನರ ಮಗ ಮಂಜುನಾಥ ನಮ್ಮ ಸ್ನೇಹಿತ. ಅವನು ಅಪ್ಪನ ಕಣ್ಣು ತಪ್ಪಿಸಿ ಆಗಾಗ ನಮ್ಮ ಜೊತೆ ಆಟಕ್ಕೆ ಬರುತ್ತಿದ್ದ. ನನ್ನ ಕೈಲಿದ್ದ ಹೊಸ ಬುಗುರಿಯನ್ನು ನೋಡಿ 'ಎಲ್ಲಿ ತಗೊಂಡೆ? ನಮ್ಮ ಅಂಗಡೀಲೆ ಇದೇ ತರದ್ದು ಇತ್ತಲ್ಲ' ಎಂದು ಆಕ್ಷೇಪಿಸುವವನಂತೆ ಕೇಳಿದ.

'ನಾನು ಯಾವಾಗಲೂ ಇಲ್ಲೇ ತಗೊಳ್ಳೋದು ಅಲ್ವಾ ಮಂಜಣ್ಣ. ಇದನ್ನು ಯಾರೋ ನೆಂಟರು ತಂದುಕೊಟ್ಟರು. ಸ್ವಲ್ಪ ಬಾಚಿಮೊಳೆ ಹಾಕಿಕೊಡೋ' ಎಂದು ಕೇಳಿಕೊಂಡೆ.

'ಹತ್ತು ಪೈಸೆ ಆಗುತ್ತೆ' ಎಂದು ಬುಗುರಿಯನ್ನು ನನ್ನ ಕೈನಿಂದ ತೆಗೆದುಕೊಂಡ. ಕಟಿಂಗ್ ಪ್ಲೇಯರಿನಲ್ಲಿ ಬುಗುರಿಗೆ ಸಿಕ್ಕಿಸಿದ್ದ ದಪ್ಪ ತಂತಿಯನ್ನು ಹಿಂದೆ ಮುಂದೆ ಆಡಿಸಿ ಹೊರಕ್ಕೆ ಎಳೆದು ತೆಗೆದ. 'ಬಾಚಿ ಮೊಳೆನಾ...' ಎಂದು ಡಬ್ಬಿಯಿಂದ ಒಂದು ಮೊಳೆಯನ್ನು ತೆಗೆದು ಅದನ್ನು ತಂತಿ ಹೊರಗೆಳೆದಾಗ ಆಗಿದ್ದ ಕುಳಿಯಲ್ಲಿ ಕೂರಿಸಿ, ನೆಟ್ಟಗೆ ಮಾಡಿ, ಸುತ್ತಿಗೆಯಿಂದ ಒಳಗೆ ಹೋಗುವಂತೆ ಕುಟ್ಟಿದ. ಬಾಚಿಮೊಳೆಯು ನಿಧಾನವಾಗಿ ಬುಗುರಿಯ ಒಳಗೆ ಇಳಿಯಿತು. ಅನಂತರ ಅದರ ಉದ್ದವನ್ನು ಪರಿಶೀಲಿಸಿ, ಅಂಗಡಿಯ ಹೊರಗೆ ಹಾಕಿದ್ದ ಕಲ್ಲಿನ ಮೇಲೆ ಅದನ್ನು ಎರಡು ಬಾರಿ ಕುಟ್ಟಿ ಮೊಳೆಯನ್ನು ಬಿಗಿ ಮಾಡಿದ. ಆ ಕಲ್ಲಿನ ಮೇಲೆ ಬಾಚಿಮೊಳೆಯ ತುದಿಯ ಎರಡು ಬದಿಯನ್ನು ಉಜ್ಜಿ ಇನ್ನಷ್ಟು ಚೂಪುಮಾಡಿ ನನಗೆ ಹಿಂದಿರುಗಿಸಿದ. 'ಬುಗುರಿ ಸಕತ್ತಾಗಿದೆ ಕಣೋ! ಇವತ್ತು ಒಂದೆರಡಾದರೂ ಚಕ್ಕೆ ಏಳುವುದು ಗ್ಯಾರಂಟಿ' ಎಂದ. ನಾನು ಖುಷಿಯಿಂದ ಜೇಬಿನಲ್ಲಿದ್ದ ಕೆಂಪು ಚಾವಟಿಯನ್ನು ತೆಗೆದು ಬುಗುರಿಗೆ ಸುತ್ತಿ ಅಂಗಡಿಯ ಮುಂದೆ ಆಡಿಸಿದೆ.

'ಬಹಳ ಹೊತ್ತು ಆಡಿತಲ್ವಾ, ಮೊಳೆ ನೇರವಾಗಿ ಕೂತಿದೆ' ಎಂದು ಖುಷಿಪಟ್ಟ. ಅನಂತರ 'ಬುಗುರಿ ಕೊಡೋ, ಒಂದು ಗುನ್ನ ಹಾಕಿಕೊಡ್ತೀನಿ' ಎಂದ. ನಾನು ಬುಗುರಿ ಹಿಡಿದ ಕೈಯನ್ನು ಹಿಂದಕ್ಕೆ ಎಳೆದುಕೊಳ್ಳುತ್ತ 'ಬೇಡ ಮಂಜಣ್ಣ, ಹೊಸ ಬುಗುರಿ ಹಾಗೆ ಇರಲಿ' ಎಂದೆ.

'ಒಂದು ಗುನ್ನ ಹಾಕಿಸಿಕೊಂಡುಬಿಡೋ, ಎಲ್ಲರ ಕಣ್ಣುಬೀಳುತ್ತೆ' ಎನ್ನುತ್ತಾ ಕಾಳಜಿಯನ್ನು ವ್ಯಕ್ತಪಡಿಸಿದ.

'ಬೇಡ ಮಂಜಣ್ಣ' ಎಂದು ನಾನು ಮನೆಗೆ ಓಡಿದ್ದೆ.

ನಾವು ಆಡುತ್ತಿದ್ದ ಬುಗುರಿಯ ಆಟದಲ್ಲಿ ಹೆಚ್ಚುಜನ ಸ್ನೇಹಿತರಿದ್ದಷ್ಟು ಪೈಪೋಟಿಯು ಜೋರಾಗಿರುತ್ತಿತ್ತು. ಮೈದಾನದ ನೆಲದ ಮೇಲೆ ಎಳೆದ ವೃತ್ತದಲ್ಲಿ ಒಂದು ಬುಗುರಿಯನ್ನು ಇಟ್ಟು ಆಟವನ್ನು ಪ್ರಾರಂಭಿಸಬೇಕು. ಆದರೆ ಯಾರ ಬುಗುರಿ ಇಡುವುದು? ಅದಕ್ಕೆ ಎಲ್ಲರೂ ತಮ್ಮತಮ್ಮ ಬುಗುರಿಗಳಿಗೆ ಚಾವಟಿಯನ್ನು ಸುತ್ತಿ, ಅದನ್ನು ಮೇಲಕ್ಕೆತ್ತಿ, ಒಂದಕ್ಕೊಂದು ತಗಲುವಂತೆ ಹಿಡಿಯಬೇಕು. ಅದು ಅರ್ಥವಾಗಬೇಕು ಎಂದರೆ ಎಲ್ಲರೂ ತಮ್ಮತಮ್ಮ ಗಾಜಿನ ಲೋಟಗಳನ್ನು 'ಚಿಯರ್ಸ್' ಹೇಳಲು ಒಂದಕ್ಕೊಂದು ತಾಗುವಂತೆ ಮೇಲೆತ್ತಿ ಹಿಡಿಯುತ್ತಾರಲ್ಲ, ಹಾಗೆ. ನೋಡಿ, ಪ್ರಾಥಮಿಕ ಪಾಠಗಳು ಹೇಗೆ ಉಪಯೋಗಕ್ಕೆ ಬರುತ್ತವೆ. ಅನಂತರ ಒಬ್ಬರು ಒಂದು, ಎರಡು, ಮೂರು ಎಂದೊಡನೆಯೇ ಅವರವರ ಬುಗುರಿಯನ್ನು ಆಡಿಸಬೇಕು. ತಿರುಗುತ್ತಿರುವ ಬುಗುರಿಯನ್ನು ಚಾವಟಿಯಿಂದ ಮೇಲಕ್ಕೆತ್ತಿ 'ಅಪೀಟ್' ಎಂದು ಹಿಡಿಯಬೇಕು. ಯಾರು ಕೊನೆಯಲ್ಲಿ ಹಿಡಿಯುತ್ತಾರೋ ಅಥವಾ ಅಪೀಟ್ ಎತ್ತಲು ಆಗುವುದಿಲ್ಲವೋ ಅವರ ಬುಗುರಿಗೆ ನೆಲದ ಮೇಲೆ ವೃತ್ತದಲ್ಲಿ ವಿರಾಜಮಾನವಾಗುವ ಯೋಗ.

ಈ ಅಪೀಟ್ ಎನ್ನುವುದು ಆಂಗ್ಲ ಪದಗಳಾದ ಅಪ್ ಮತ್ತು ಇಟ್ ಎನ್ನುವುದರ ಅಪಭ್ರಂಶ. ಇದು ಹೇಗೋ ನಮ್ಮ ಜಾನಪದ ಆಟದಲ್ಲಿ ಬಂದು ಸೇರಿಕೊಂಡುಬಿಟ್ಟಿತ್ತು. 'ನಮ್ಮ ಜಾನಪದ ಆಟದ ಮೇಲೆ ಆಂಗ್ಲರ ಆಕ್ರಮಣ ಹಾಗೂ ದಬ್ಬಾಳಿಕೆ' ಎಂಬ ಬಗ್ಗೆ ಸಂಶೋಧನೆಯನ್ನೇ ನಡೆಸಬಹುದೇನೋ. ನಮ್ಮ ದಾಸರು ತಮ್ಮ ಪ್ರಸಿದ್ಧ ಕೀರ್ತನೆಯಲ್ಲಿ 'ಮಾಧವ ನೀ ಬಾ, ಯದುಕುಲ ನಂದನ' ಎಂದು ಕರೆದು ಚಿನಿಕೋಲು, ಚೆಂಡು, ಬುಗುರಿಗಳನ್ನು ತುಂಟಕೃಷ್ಣನ ಕೈಯಲ್ಲಿ ಕೊಟ್ಟಿದ್ದಾರೆ. ಹೀಗೆ ಪುರಾತನವಾದ ಬುಗುರಿಯಾಟದಲ್ಲಿ 'ಅಪೀಟ್' ಎಂಬ ಆಂಗ್ಲ ಅಪಭ್ರಂಶವು ಹೇಗೆ ಸೇರಿಕೊಂಡಿತು ಎನ್ನುವುದು ಚಿಂತನೀಯ ಅಲ್ಲವೇ?

ಈ ಸಮಾಜವಾದಿ ಬುಗುರಿಯಾಟವನ್ನು ಬಂಡವಾಳಶಾಹಿ ಕ್ರಿಕೆಟ್ಟಿನೊಂದಿಗೆ ಹೋಲಿಸಿದರೆ ಬುಗುರಿಯ ಹಿರಿಮೆ ಗೊತ್ತಾಗುತ್ತದೆ. ಬುಗುರಿಯ ಆಟವನ್ನು ಆಡುವಾಗ ಒಬ್ಬರ ನಂತರ ಮತ್ತೊಬ್ಬರಿಗೆ ವೃತ್ತದಲ್ಲಿರುವ ಬುಗುರಿಯನ್ನು ಎಗರಿಸುವ ಅವಕಾಶವು ಬರುತ್ತದೆ. ಯಾರಾದರು ಹಾಗೆ ಎಗರಿಸಿದರೆ ಎಲ್ಲರೂ ಬುಗುರಿಯನ್ನು ಆಡಿಸಿ ಅಪೀಟ್ ಎತ್ತಬೇಕು. ಹಾಗಾಗಿ ಬುಗುರಿಯನ್ನು ಚಾವಟಿಯಿಂದ ಸುತ್ತುವುದು, ಆಡಿಸುವುದು, ಮೇಲಕ್ಕೆತ್ತಿ ಅಪೀಟ್ ಮಾಡುವುದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಆಟಕ್ಕೆ ಕಾವೇರುತ್ತಿದ್ದಂತೆ ಪ್ರತಿಯೊಬ್ಬರೂ ಚೈತನ್ಯದ ಚಿಲುಮೆಗಳಾಗಿಬಿಡುತ್ತಾರೆ. ಆಟದ ಕೊನೆಗೆ ಆಟವಾಡಿದವರೆಲ್ಲರೂ ಗೆದ್ದಿರುತ್ತಾರೆ.

ಆದರೆ ಸಿರಿವಂತರ ಒಡೆತನದ ತಂಡವು ಆಡುವ ಕ್ರಿಕೆಟ್ ಆಟದಲ್ಲಿ ಮಧ್ಯಮ ಕ್ರಮಾಂಕದ ದಾಂಡಿಗನ ಪರಿಸ್ಥಿತಿಯನ್ನು ಗಮನಿಸಿ. ಮೊದಲಿನ ಆಟಗಾರರು ಚೆನ್ನಾಗಿ ಆಡಿದರೆ, ಅವನಿಗೆ ಬ್ಯಾಟ್ ಹಿಡಿಯುವ ಪ್ರಮೇಯವೇ ಬರುವುದಿಲ್ಲ. ಅವನು ದಾಂಡಿಗನಾದುದರಿಂದ ಚೆಂಡನ್ನು ಬೋಲ್ ಮಾಡುವ ಅವಕಾಶವೂ ಇರುವುದಿಲ್ಲ. ಅಕಸ್ಮಾತ್ ಬ್ಯಾಟ್ ಹಿಡಿಯುವ ಅವಕಾಶ ಸಿಕ್ಕಿ ಮೊದಲನೆಯ ಬಾಲಿಗೆ ಔಟಾದರೆ, ಮತ್ತೆ ಬ್ಯಾಟ್ ಹಿಡಿಯಬೇಕಾದರೆ ಹತ್ತೊಂಬತ್ತು ಆಟಗಾರರು ಹೊರಬೀಳಬೇಕು. ಇನ್ನು ಹನ್ನೆರಡನೇ ಆಟಗಾರನಾಗಿದ್ದರೆ, ಆಟವಾಡುತ್ತಿರುವವರಿಗೆ ಆಗಾಗ ಕುಡಿಯಲು ನೀರನ್ನು ತೆಗೆದುಕೊಂಡು ಹೋಗಿ, ಮೂತಿ ಒರೆಸಿಕೊಳ್ಳಲು ಟವೆಲ್ ಕೊಟ್ಟರೆ ಅವನ ಪುಣ್ಯ. ಆಗ 'ಬಹಳ ಚೆನ್ನಾಗಿ ಆಡ್ತಿದಿ; ಶತಕ ಬಾರಿಸು; ಬಿಡಬೇಡ' ಎಂದು ಬಾಯಲ್ಲಿ ಹೇಳಿದರೂ 'ಹಾಳಾದೋನು, ಬೇಗ ಔಟ್ ಆಗಬಾರದೆ. ಅವನು ಸೊನ್ನೆ ಸುತ್ತಿದರೆ ಮುಂದಿನ ಮ್ಯಾಚಿನಲ್ಲಿ ನನಗೆ ಚ್ಯಾನ್ಸ್ ಗ್ಯಾರಂಟಿ' ಎಂದುಕೊಳ್ಳುವುದು ಅವನ ಸೋಗಿನ ಸಭ್ಯ ಕ್ರೀಡಾಪಟುತ್ವ. ಅವನು ತನ್ನ ತಂಡದ ಹಿನ್ನಡೆಯನ್ನು ಹಾರೈಸುವ ಗೋಮುಖ ವ್ಯಾಘ್ರ. ಇಷ್ಟೆಲ್ಲ ಆದರೂ ತನ್ನ ತಂಡ ಬಹುಮಾನ ಗೆದ್ದರೆ, ಇವನಿಗೂ ಪಾಲು. ಆದರೆ ಬುಗುರಿಯಲ್ಲಿ ಹಾಗಿಲ್ಲ, ದುಡ್ಡಿನ ಮಾತೇ ಇಲ್ಲ, ಆಟವೇ ಎಲ್ಲ. ಸರ್ವರಿಗೂ ಆಟದಲ್ಲಿ ಸಮಪಾಲು. ಬುಗುರಿಯಾಡುವುದು ಆಟಕ್ಕೆ, ಕ್ರಿಕೆಟ್ ನೋಟಕ್ಕೆ.

ಬುಗುರಿಯನ್ನು ಆಡಿಸಿದಾಗ ಅದು ಮೊಳೆಯ ಮೇಲೆ ತಿರುಗದೆ ಮರದ ತಲೆಯ ಭಾಗ ನೆಲಕ್ಕೆ ಅಪ್ಪಳಿಸಿದರೆ 'ಓ ಲಡ್ಡ' ಎಂದು ಕಿರುಚುತ್ತಿದ್ದರು. ನೆಲಕ್ಕೆ ಬಿದ್ದ ರಭಸಕ್ಕೆ ಅದು ಮೇಲಕ್ಕೆ ಎಗರಿ, ಪುಟಿದು, ಉರುಳುತ್ತಾ ದೂರಕ್ಕೆ ಹೋಗುತಿತ್ತು. 'ಲಡ್ಡ' ಎಂದರೆ ನಿಷ್ಪ್ರಯೋಜಕವೆಂದು ದಶಕಗಳ ಮೇಲೆ ನನಗೆ ತಿಳಿಯಿತು. ಆಗಲೇ 'ಲಡಕಾಸಿ ಬಸ್ಸು' ಎಂದರೆ ಪ್ರಯಾಣಕ್ಕೆ ಸೂಕ್ತವಲ್ಲದ, ಒಂದು ಕಾಸಿನ ಬೆಲೆಯೂ ಇಲ್ಲದ ನಿಷ್ಪ್ರಯೋಜಕ ಬಸ್ಸು ಎಂದು ಗೊತ್ತಾಗಿದ್ದು. ಲಡ್ಡಕಾಸು ಎಂಬುದು ಜನಸಾಮಾನ್ಯರ ಮಾತಿನಲ್ಲಿ 'ಲಡಕಾಸಿ'